

## ಟಿನ್ ಒಳಗೆ ಹಾವಿನ ತಲೆ

ಬಾಯಾರಿಕೆ ನೀಗಿಸಿಕೊಳ್ಳಲೆಂದು ಕೂಲ್‌ಡ್ರಿಂಕ್ಸ್‌ನ ಟಿನ್‌ನೊಳಗೆ ತಲೆ ಹಾಕಿ ಅಲ್ಲೇ ಸಿಲುಕಿದ ಹಾವೊಂದರ ಚಿತ್ರವಿದು. ಅದನ್ನು ರಕ್ಷಿಸಿದವರ ಚಿತ್ರಗಳನ್ನೂ ಕಾಣಬಹುದು. ಇಲ್ಲಿ ಎರಡು ವಿಷಯಗಳನ್ನು ಗಮನಿಸಬೇಕು. ಒಂದು, ನಮ್ಮೂರಿನ ಜನರ ಧೈರ್ಯ ಮತ್ತು ಮಾನವೀಯತೆ. ಮತ್ತೊಂದು, ಮಲೆನಾಡಲ್ಲೂ ನೀರಿಗೆ ಹಾಹಾಕಾರ ಎದುರಾಗಿರುವುದು.

ಸ್ವಲ್ಪ ಹೆಚ್ಚುಕಮ್ಮಿಯಾದರೂ ಹಾವಿನ ಕಡಿತಕ್ಕೆ ತುತ್ತಾಗುವ ಸಂಭವ ಇದ್ದರೂ ಅದರ ರಕ್ಷಣಾ ಕಾರ್ಯದಲ್ಲಿ ಪಾಲ್ಗೊಂಡವರ ಕಾರ್ಯವು ಮೆಚ್ಚುವಂತಹದ್ದು. ಮಲೆನಾಡು ದಟ್ಟ ಅರಣ್ಯ ಪ್ರದೇಶ, ತಂಪಾದ ವಾತಾವರಣಕ್ಕೆ ಹೆಸರುವಾಸಿ. ಆದರೆ ಈ ವರ್ಷ ಪರಿಸ್ಥಿತಿ ಭಿನ್ನವಾಗಿದೆ. ಬಿಸಿಲಿನ ತಾಪ ತೀವ್ರಗೊಡಿದೆ. ಇದರ ಪರಿಣಾಮ ಮನುಷ್ಯರಿಗೆ ಮಾತ್ರವಲ್ಲದೆ ಪ್ರಾಣಿ, ಪಕ್ಷಿಗಳ ಮೇಲೂ ಉಂಟಾಗುತ್ತಿದೆ. ಇದರಿಂದಾಗಿ ಎಲ್ಲ ಜೀವಸಂಕುಲವು ಅಪಾಯದಂಚಿನಲ್ಲಿವೆ. ಈ ಬಗ್ಗೆ ಮನುಷ್ಯನ ಕಾಳಜಿ ಅಗತ್ಯವಿದೆ.

–ಜಯಂತಿ ರಾಘವೇಂದ್ರ, ಆಗುಂಬೆ







## ಕಿಟಕಿ ‘ಖಾರ’

ಕಿಟಕಿ ಖಾರ ಎಂಬ ಹೆಸರನ್ನು ಮೊದಲ ಬಾರಿಗೆ ನಾನು ಕೇಳಿಸಿಕೊಂಡಾಗ ಖಾರದ ಹೆಸರು ಹೀಗೂ ಇರುತ್ತಯೇ ಎಂದು ಆಶ್ಚರ್ಯಪಟ್ಟಿದ್ದೆ. ಈ ಹೆಸರನ್ನು ಕೇಳಿದ್ದು, ತುಮಕೂರು ಜಿಲ್ಲೆಯ ‘ತಿಪಟೂರು’ ಪಟ್ಟಣದಲ್ಲಿ ರೈಲ್ವೆ ನಿಲ್ದಾಣದ ಸಮೀಪದಲ್ಲಿ. ‘ಕಿಟಕಿ ಖಾರ’ ಎಂದೇ ಪ್ರಸಿದ್ಧಿಗೊಂಡ ಖಾರದ (ಖಾರದ ಪದಾರ್ಥಗಳು) ಮಳಿಗೆಯೊಂದು ಇಲ್ಲಿ ಹಲವು ವರ್ಷಗಳಿಂದ ಪ್ರಸಿದ್ಧಿಗೊಂಡಿದೆ. ಅಂಗಡಿ ಪ್ರಾರಂಭವಾದಾಗಿನಿಂದಲೂ ಕಿಟಕಿ ಮೂಲಕವೇ ಗ್ರಾಹಕರಿಗೆ ಖಾರ ಮಾರಾಟ ಮಾಡಲಾಗುತ್ತಿದೆ. ಇದೇ ಕಾರಣಕ್ಕೆ ಮಳಿಗೆಗೆ ಈ ಹೆಸರು ಬಂದಿದೆ. ಖಾರದ ಜೊತೆಗೆ ಖಾರ ಹಚ್ಚಿದ ಮಸಾಲೆ ಕಡಲೆ ಬೇಳೆ, ಸಿಹಿತಿಂಡಿಗಳಾದ ಲಾಡು, ಮೈಸೂರ್ ಪಾಕು ಕೂಡ ತಯಾರಿಸುತ್ತಾರೆ. ಇಲ್ಲಿ ಸಿಗುವ ಎಲ್ಲ ರೀತಿಯ ಖಾರ ಬಹಳ ರುಚಿಯಾಗಿ, ಗರಿಗರಿಯಾಗಿರುತ್ತದೆ. ಈ ಅಂಗಡಿಗೆ ಬೋರ್ಡ್ ಸಹ ಇಲ್ಲ, ಅಂದರೆ ಕಿಟಕಿಯೇ ಈ ಅಂಗಡಿಯ ಟ್ರೇಡ್ ಮಾರ್ಕ್.

–ಟಿ.ಎಸ್. ಪ್ರತಿಭಾ, ಚಿತ್ರದುರ್ಗ